ದಿನಾಂಕಃ 17.01.2020 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮು. ಪಾಟೀಸವಾಲುಃ ವಾದಿ ಪರ ಶ್ರೀ ಐ.ಎಸ್.ಡಿ ವಕೀಲರಿಂದಃ

20. ನಾನು ವಾದಿಯ ಮದುವೆಯ ಪೋಟೋವನ್ನು ನೋಡಿದರೆ ನನ್ನ ಭಾವ ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರನ್ನು ಗುರ್ತಿಸುತ್ತೇನೆ. ಸಾಕಿಃಗೇ ಈಗ ಪೋಟೊವನ್ನು ತೋರಿಸಲಾಗಿ, ಈ ಪೋಟೋವನ್ನು ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರ ಮನೆಯಲ್ಲಿ ತೆಗೆದ ಪೋಟೋ ಎಂದು ಸಾಕ್ಷಿ ಒಪ್ಪಿಕೊಂಡಿದ್ದು, ಈ ಸಮಯದಲ್ಲಿ ಪ್ರತಿವಾದಿ ಪರ ವಕೀಲರು ಸಿಡಿ ಇಲ್ಲದೇ ಪೋಟೋವನ್ನು ಗುರ್ತಿಸಲು ಬರುವುದಿಲ್ಲ ಎಂದು ತಕರಾರು ಹೇಳಿದ್ದು ಪ್ರತಿವಾ ದಿ ಪರ ವಕೀಲರ ತಕರಾರಿಗೆ ಒಳಪಟ್ಟು ಅದನ್ನು ನಿ.ಪಿ. 12 ಎಂದು ಗುರ್ತಿಸಲಾಯಿತು. ನಿ.ಪಿ. 12 ವಾದಿಯ ಮದುವೆ ಸಮಯದಲ್ಲಿ ತೆಗೆದ ಛಾಯಾಚಿತ್ರವಾಗಿರುತ್ತದೆ ಎಂದರೆ ನಿಜ. ನಮ್ಮ ಸಂಪ್ರದಾಯದಲ್ಲಿ ಮದುವೆ ಹೆಣ್ಣು ತವರುಮನೆಯಿಂದ ಕಲ್ಯಾಣ ಮಂಟಪಕ್ಕೆ ಹೋಗುವ ಮೊದಲು ಕೆಲವು ಶಾಸ್ತ್ರಗಳನ್ನು ಮಾಡುತ್ತಾರೆ ಎಂದರೆ ನಿಜ. ನಿ.ಪಿ. 12 ಆ ಸಮಯದಲ್ಲಿ ತೆಗೆದಂತಹ ಪೋಟೋ ಆಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ. 12 ಮದುವೆ ಹಿಂದಿನ ದಿನ ತೆಗೆದಂತಹ ಪೋಟೋ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ನಿ.ಪಿ. 12 ನ್ನು ನೋಡಿ ವಾದಿಯ ಮನೆಯ ಗೃಹಪ್ರವೇಶದ ಸಮಯದಲ್ಲಿ ತೆಗೆ ದಿರುವ ಪೋಟೋ ಇರಬಹುದು ಎಂದು ಹೇಳುತ್ತಾರೆ.

21. ನಿ.ಪಿ. 12 ರಲ್ಲಿ ತೋರಿಸಿರುವ ಮನೆ ಚಿಂತಾಮಣಿಯಲ್ಲಿರುವ ಮನೆ ಎಂದರೆ ಸರಿಯಲ್ಲ. ವಾದಿ ಬೆಂಗಳೂರಿನಲ್ಲಿ ಮನೆ ಕಟ್ಟಿ 12-13 ವರ್ಷಗಳಾಗಿರುತ್ತದೆ. ನಿ.ಪಿ. 12 ರಲ್ಲಿ ವಾದಿಗೆ ಶ್ರೀನಿವಾಸಯ್ಯ ಹಾಗೂ

ಪಾರ್ವತಮ್ಮ ಅವರು ತಂದೆ ತಾಯಿಯಾಗಿ ಆಶೀರ್ವಾದ ಮಾಡುತ್ತಿದ್ದಾರೆ ಎಂದರೆ ನಿಜ.

22. ಸಾಕ್ಷಿಗೆ ಈಗ 6 ಪೋಟೋಗಳನ್ನು ತೋರಿಸಲಾಗಿ, ಅವುಗಳನ್ನು ವಾದಿಯ ಮದುವೆಯ ಪೋಟೋಗಳು ಎಂದು ಸಾಕ್ಷಿ ಒಪ್ಪಿಕೊಂಡಿದ್ದು, ಪ್ರತಿವಾದಿ ಪರ ವಕೀಲರು ಸಿಡಿ ಇಲ್ಲದೇ ಪೋಟೋಗಳನ್ನು ಗುರ್ತಿಸಲು ಬರುವುದಿಲ್ಲ ಎಂದು ತಕರಾರು ಹೇಳಿದ್ದು, ಪ್ರತಿವಾದಿ ಪರ ವಕೀಲರ ಈ ತಕರಾರಿಗೆ ಒಳಪಟ್ಟು ಪೋಟೋಗಳನ್ನು ನಿ.ಪಿ. 13 ರಿಂದ 18 ಎಂದು ಗುರ್ತಿಸಲಾಯಿತು.

23. ಈ ಎಲ್ಲಾ ಪೋಟೋಗಳನ್ನು ನೋಡಲಾಗಿ ಕಂಡು ಬಂರುವುದೇನೆಂದರೆ ವಾದಿಯ ಮದುವೆಯನ್ನು ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರು ವಾದಿಯ ತಂದೆ ತಾಯಿಯ ಸ್ಥಾನದಲ್ಲಿ ನಿಂತು ಮದುವೆ ಮಾಡಿಸಿರುತ್ತಾರೆ ಎಂದರೆ ನಿಜ. ವಾದಿ ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರನ್ನು ಅಪ್ಪ ಅಮ್ಮ ಎಂದು ಕರೆಯುತ್ತಿದ್ದರು, ಅದು ನನಗೆ ಗೊತ್ತಿದೆ ಎಂದರೆ ನಿಜ. ವಾದಿ ಭಾಗ್ಯಲಕ್ಷ್ಮಿ ಹಾಗೂ ವೆಂಕಟೇಶ್ ಅವರನ್ನು ಅಕ್ಕ ಅಣ್ಣ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಅಪ್ಪ ಅಮ್ಮ ಎಂದು ಕರೆಯುತ್ತಿದ್ದರು ಎಂದು ಹೇಳುತ್ತಾರೆ. ವಾದಿಯ ಮದುವೆಯ ಸಂದರ್ಭದಲ್ಲಿ ಭಾಗ್ಯಲಕ್ಷ್ಮಿ ಹಾಗೂ ವೆಂಕಟೇಶ್ ಅವರು ಹಾಜರಿದ್ದರು ಎಂದರೆ ನಿಜ. ಭಾಗ್ಯಲಕ್ಷ್ಮೀ ಹಾಗೂ ವೆಂಕಟೇಶ್ ಅವರು ಕುಟುಂಬದ ಸದಸ್ಯರಾಗಿ ವಾದಿಯ ಮದುವೆಯಲ್ಲಿ ಹಾಜರಿದ್ದರು ಎಂದರೆ ಸರಿಯಲ್ಲ. ಭಾಗ್ಯಲಕ್ಷ್ಮಿ ಹಾಗೂ ವೆಂಕಟೇಶ್ ಅವರ ಇಬ್ಬರು ಮಕ್ಕಳಾದ ರೇಖ ಹಾಗೂ ಲತಾ ಅವರ ಮದುವೆಯಾಗಿದ್ದು, ಅವರ ಮದುವೆಗೆ ನಾನು ಹೋಗಿರುತ್ತೇನೆ ಎಂದರೆ ನಿಜ. ಲತಾ ಹಾಗೂ ರೇಖ ಅವರ

ಮದುವೆಯಲ್ಲಿ ಕನ್ಯಾದಾನವನ್ನು ವೆಂಕಟೇಶ್ ಹಾಗೂ ಭಾಗ್ಯಲಕ್ಷ್ಮೀ ಅವರು ಮಾಡಿರುತ್ತಾರೆ ಎಂದರೆ ನಿಜ. ಲತಾ ಹಾಗೂ ರೇಖ ಅವರ ಮದುವೆಯಲ್ಲಿ ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಮತ್ತು ವಾದಿ ಹಾಜರಿದ್ದರು ಎಂದರೆ ನಿಜ. ಆ ಇಬ್ಬರ ಮದುವೆಯಲ್ಲಿ ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರು ಕುಟುಂಬದ ಸದಸ್ಯರಾಗಿ ಪಾಲ್ಗೊಂಡಿದ್ದರು ಎಂದರೆ ನಿಜ.

24. ನಮ್ಮ ಸಂಪ್ರದಾಯದಲ್ಲಿ ಹೆಣ್ಣುಮಕ್ಕಳು ಋತುಮತಿಯಾದರೇ ಒಂದು ಶಾಸ್ತ್ರ ಮಾಡುತ್ತಾರೆ ಎಂದರೆ ನಿಜ. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಲಾಗಿ, ಅದರಲ್ಲಿರುವ ವ್ಯಕ್ತಿಗಳು ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಮತ್ತು ವಾದಿ ಇರುತ್ತಾರೆ ಎಂದು ಹೇಳಿದ್ದು, ಅದನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿ.ಪಿ. 19 ಎಂದು ಗುರ್ತಿಸಲಾಯಿತು. ವಾ ದಿ ನನ್ನ ಅಕ್ಕನ ಮಗಳು ಆಗಿದ್ದರಿಂದ ಅವರನ್ನು ನಾನು ಚಿಕ್ಕವರಿದ್ದಾಗಿನಿಂದ ನೋಡಿರುತ್ತೇನೆ ಎಂದರೆ ನಿಜ.

25. ನಿ.ಪಿ. 19 ನ್ನು ವಾದಿ ಚಿಕ್ಕವರಿದ್ದಾಗ ತೆಗೆದಂತಹ ಫೋಟೋವಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ. 19 ವಾದಿ ಋತುಮತಿಯಾದಾಗ ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರ ಮನೆಯಲ್ಲಿ ತೆಗೆದಂತಹ ಫೋಟೋವಾಗಿರತ್ತದೆ ಎಂದರೆ ಸರಿಯಲ್ಲ. ಚಿಂತಾಮಣಿಯ ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರ ಮನೆಯ ಅಕ್ಕಪಕ್ಕದ ಜನರಿಗೆ ವಾ ದಿ ಶ್ರೀನಿವಾಸಯ್ಯ ಹಾಗೂ ಪಾರ್ವತಮ್ಮ ಅವರ ಮಗಳು ಎಂದೇ ಚಿರಪರಿಚಿತಳಾಗಿರುತ್ತಾರೆ ಎಂದರೆ ಸರಿಯಲ್ಲ.

26. ನಾನು ಈಗ ಚಿಂತಾಮಣಿ ಹಾಗೂ ಬೆಂಗಳೂರು ಎರಡೂ ಕಡೆ ವಾಸ ಇರುತ್ತೇನೆ. ನನ್ನ ಚಿಂತಾಮಣಿಯ ವಿಳಾಸ ಪ್ರಭಾಕರ್ ಲೇಔಟ್, ಬಿಹೈಂಡ್ ವಿಶಾಲ್ ಬಾರ್ ಅಂಡ್ ರೆಸ್ಟೋರೆಂಟ್, ಚಿಂತಾಮಣಿ ಆಗಿರುತ್ತದೆ. ನನ್ನ ಮನೆಗೆ ನಂ. ಇರುವುದಿಲ್ಲ, ಆದರೆ ಖಾತೆ ನಂ. ಇದ್ದು ಅದು ಗೊತ್ತಿಲ್ಲ. ಚಿಂತಾಮಣಿಯಲ್ಲಿರುವ ಮನೆ ಚೌಡರೆಡ್ಡಿ ಅವರ ಹೆಸರಿನಲ್ಲಿರುತ್ತದೆ. ನನ್ನ ಮತ್ತು ಚೌಡರೆಡ್ಡಿ ಅವರ ಮಧ್ಯ ಮನೆಗೆ ಸಂಬಂಧಿಸಿದಂತೆ ಬಾಡಿಗೆ ಕರಾರು ಪತ್ರ ಇರುವುದಿಲ್ಲ.

27. ನಾನು ಬೆಂಗಳೂರಿನ ನಂ. 154, 6ನೇ ಮೈನ್, ವಿನಾಯಕ ನಗರ, ಬಾಗಲೂರು ಮೈನ್ ರೋಡ್, ಬೆಂಗಳೂರು ಇದು ನನ್ನ ಬೆಂಗಳೂರಿನ ವಿಳಾಸವಾಗಿರುತ್ತದೆ. ನಾನು ಚಿಂತಾಮಣಿಯಲ್ಲಿ ವಾಸ ಮಾಡುತ್ತೇನೆ ಎಂದು ತೋರಿಸಲು ನನ್ನ ಕಡೆ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನನ್ನ ಕಡೆ ಮತದಾರರ ಗುರ್ತಿನ ಚೀಟಿ ಮತ್ತು ಪಡಿತರ ಚೀಟಿ ಇರುತ್ತದೆ. ಈ ಎರಡೂ ದಾಖಲೆಗಳನ್ನು ಹೊರತು ಪಡೆಸಿ ನಾನು ಚಿಂತಾಮಣಿಯಲ್ಲಿ ವಾಸ ಇರುವ ಬಗ್ಗೆ ಬೇರೆ ದಾಖಲೆ ಇರುವುದಿಲ್ಲ. ಈ ಎರಡೂ ದಾಖಲೆಗಳನ್ನು ನಾನು ಚಿಂತಾಮಣಿಯ ಮನೆಯ ಮಾಲೀಕನಿದ್ದಾಗ ಮಾಡಿಸಿದಂತಹ ದಾಖಲೆಗಳು ಎಂದರೆ ನಿಜ. ನಾನು ಚಿಂತಾಮಣಿಯ ಮನೆಯನ್ನು ಮಾರಾಟ ಮಾಡಿದ ನಂತರ ಆಧಾರ್ ಕಾರ್ಡ್‌ನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ನಿಜ. ಆಧಾರ್ ಕಾರ್ಡನ್ನು ನಾನು ಬೆಂಗಳೂರಿನಲ್ಲಿ ಮಾಡಿಸಿಕೊಂಡಿರುತ್ತೇನೆ ಎಂದರೆ ನಿಜ. ಆ ಆಧಾರ್ ಕಾರ್ಡಿನಲ್ಲಿ ನಾನು ಬೆಂಗಳೂರಿನ ವಾಸಿ ಎಂದು ತೋರಿಸಿರುತ್ತೇನೆ ಎಂದರೆ ನಿಜ. ನಾನು ಬೆಂಗಳೂರಿನ ವಿಳಾಸದಲ್ಲಿ ಬೇರೆ ದಾಖಲೆಗಳನ್ನು ಮಾಡಿಸಿಕೊಂಡಿಲ್ಲ.

28. 2005-06 ರಲ್ಲಿ ನನ್ನ ವ್ಯವಹಾರಕ್ಕೋಸ್ಕರ ಕರ್ನಾಟಕ ರಾಜ್ಯ ಕೈಗಾರಿಕ ಸಹಕಾರ ಬ್ಯಾಂಕ್ ನಿಯಮಿತ ಕೋಲಾರದಲ್ಲಿ 8 ಲಕ್ಷ ರೂ. ಸಾಲ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಈ ಬ್ಯಾಂಕಿನಲ್ಲಿ 1994 ರಲ್ಲಿ ಮನೆ ಕಟ್ಟುವಾಗ ಸಾಲ ಮಾಡಿದ್ದೆ. ನಾನು 1994 ರಲ್ಲಿ 4 ಲಕ್ಷ ರೂ ಸಾಲ ಮಾಡಿದ್ದೆ. 2005-06 ರಲ್ಲಿ ನಾನು ಮತ್ತು ನನ್ನ ಕುಟುಂಬದವರು ಮೇಲೆ ಹೇಳಿದ ಬ್ಯಾಂಕಿಗೆ 8 ಲಕ್ಷ 80 ಸಾವಿರ ರೂ.ಗಳಿಗೆ ಒತ್ತಿ ಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ನೆನಪಿಲ್ಲ. ನಾನು ಮೇಲೆಹೇಳಿದ ಬ್ಯಾಂಕಿಗೆ ನಂ. 655/10, 655/11, 655/9, 655/12 ಒಟ್ಟು ಅಳತೆ ಪೂರ್ವ ಪಶ್ಚಿಮ 50 ಉತ್ತರ ದಕ್ಷಿಣ 27 ಆಸ್ತಿಯನ್ನೇ ಒತ್ತಿ ಮಾಡಿರುತ್ತೇನೆ ಎಂದರೆ ನಿಜ. ಮೇಲೆ ಹೇಳಿದ ಬ್ಯಾಂಕಿನಲ್ಲಿ ನಾನು ವ್ಯಾಪಾರ ಸಾಲ ಮಾಡಿದ್ದೆ ಎಂದರೆ ನಿಜ. 2009 ರಲ್ಲಿ ನಾನು ಮಾಡಿದ ಸಾಲ ಎನ್‌ಪಿಎ ಆಗಿರುತ್ತದೆ ಎಂದರೆ ಸರಿಯಲ್ಲ.

29. ನಾನು ಒತ್ತಿ ಮಾಡಿದ ಆಸ್ತಿಯನ್ನು ದಿಃ 12.02.2009 ರಲ್ಲಿ ಒನ್‌ಟೈಮ್ ಸೆಟಲ್‌ಮೆಂಟದಲ್ಲಿ ಮೇಲೆ ಹೇಳಿದ ಬ್ಯಾಂಕಿನಲ್ಲಿ ಬಿಡುಗಡೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ಜಾಗಕ್ಕೆ ಒಬ್ಬ ಖರೀದಿದಾರರನ್ನು ಹುಡುಕಾಡಿದ್ದು, ಖರೀದಿದಾರ ನಿಲ್ ಇಸಿ ಬೇಕು ಎಂದು ಹೇಳಿದ್ದರಿಂದ ನಾನು ಒಟಿಎಸ್ ಮುಖಾಂತರ ಆಧಾರ ಬಿಡುಗಡೆ ಮಾಡಿದ್ದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಸ್ವತ್ತನ್ನು ಆಧಾರ ಬಿಡುಗಡೆ ಮಾಡಿದ ನಂತರ ಸದರಿ ಆಸ್ತಿಯನ್ನು ಎನ್.ಕೆ. ನಾಗೇಂದ್ರ ಅವರಿಗೆ ಶುದ್ಧ ಕ್ರಯ ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ನಿಜ. ನನಗೆ ಆ ಸಮಯದಲ್ಲಿ ಹಣದ ಅವಶ್ಯಕತೆ ಇದ್ದುದ್ದರಿಂದ ಆಸ್ತಿ ಮಾರಾಟ ಮಾಡುವ ವಿಚಾರ ಮಾಡಿದ್ದೆ ಎಂದರೆ ನಿಜ. ಆ ಸಮಯದಲ್ಲಿ ನಾನು

ಮಾರ್ಬಲ್ ಗ್ರಾನೈಟ್ ವ್ಯಾಪಾರ ಚಿಂತಾಮಣಿಯಲ್ಲಿ ಮಾಡುತ್ತಿದ್ದೆ. ನಾನು ಅದನ್ನು ಸ್ವಂತವಾಗಿ ವ್ಯಾಪಾರ ಮಾಡುತ್ತಿದ್ದೆ. ಆ ಗ್ರಾನೈಟ್ ಅಂಗಡಿಗೆ ಅಶ್ವಿನಿ ಗ್ರಾನೈಟ್ ಎಂದು ಹೆಸರು ಇಟ್ಟಿದ್ದೆ ಎಂದರೆ ನಿಜ. ನಾನು ಬೆಂಗಳೂರಿಗೆ ಹೋಗುವ ಮೊದಲು ಗ್ರಾನೈಟ್ ವ್ಯಾಪಾರವನುನ ಮುಕ್ತಾಯಗೊಳಿಸಿರುತ್ತೇನೆ. ನಾನು 2012 ರಲ್ಲಿ ಬೆಂಗಳೂರಿಗೆ ಹೋಗಿರುತ್ತೇನೆ. ನನಗೆ ವ್ಯಾಪಾರದಲ್ಲಿ ನಷ್ಟವಾಗಿದ್ದರಿಂದ ನಾನು ಆ ವ್ಯಾಪಾರವನ್ನು ಮುಗಿಸಿರುತ್ತೇನೆ ಎಂದರೆ ಸರಿಯಲ್ಲ.

30. ನಾನು 2010-11 ರಲ್ಲಿ ನನಗೆ ಗೊತ್ತಿರುವ ಸ್ನೇಹಿತರ ಕಡೆಯಿಂದ ಕೈ ಸಾಲ ಮಾಡಿರುತ್ತೇನೆ ಎಂದರೆ ಇರಬಹುದು. 2010-11 ಆದರೂ ನನ್ನ ಆರ್ಥಿಕ ಸ್ಥಿತಿ ಸರಿಯಾಗಿ ಬರಲಿಲ್ಲ ಎಂದರೆ ಸರಿಯಲ್ಲ. 2011 ರಲ್ಲಿ ನನಗೆ ಒಂದು ಮನೆ ಹಾಗೂ ಕನಂಪಲ್ಲಿಯಲ್ಲಿ ಒಂದು ನಿವೇಶನ ಇತ್ತು. ನಾನು ಬೆಂಗಳೂರಿಗೆ ಹೋಗುವ ಮೊದಲು ಮನೆ ಮತ್ತು ನಿವೇಶನವನ್ನು ಚೌಡರೆಡ್ಡಿ ಅವರಿಗೆ ಮಾರಿ ಹೋಗಿರುತ್ತೇನೆ  ಎಂದರೆ ನಿಜ. ಕಾರಣ ಬೆಂಗಳೂರಿಗೆ ಹೋಗುವ ಉದ್ದೇಶ ದಿಂದ ಮಾರಿರುತ್ತೇನೆ ಎಂದು ಸಾಕ್ಷಿ ಮುಂದುವರೆದು ಹೇಳುತ್ತಾರೆ.

31. ಚೌಡರೆಡ್ಡಿ ಅವರ ಹೆಸರಿಗೆ ಆದ ಕ್ರಯ ಪತ್ರ ದಿಃ 17.01.2011 ರಂದು ಆಗಿರುತ್ತದೆ ಎಂದರೆ ನಿಜ. ಚೌಡರೆಡ್ಡಿ ಅವರ ಹೆಸರಿಗೆ ಬರೆದ ಕ್ರಯ ಪತ್ರದಲ್ಲಿ ನನ್ನ ಗೃಹಕೃತ್ಯ, ಸಾಲದ ತಿರುವಳಿ ವಗೈರಿಗಳಿಗೆ ಎಂದು ಬರೆಯಲಾಗಿದೆ ಎಂದರೆ ನಿಜ. ಇದನ್ನು ಸಾಮಾನ್ಯವಾಗಿ ಎಲ್ಲಾ ಖರೀದಿ ಪತ್ರಗಳಲ್ಲಿ ಬರೆಯುತ್ತಾರೆ ಎಂದು ಸಾಕ್ಷಿ ಮುಂದುರೆದು ಹೇಳುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.